ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 18-07-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | "ಕನ್ನಡ ಮತ್ತು ಸಂಸ್ಕೃತಿ ಯುವಜನೋತ್ಸವ"<br>ಉದ್ಘಾಟನೆ:<br>ಡಾ. ಎಲ್. ಹನುಮಂತಯ್ಯ,<br>ಅಧ್ಯಕ್ಷರು,<br>ಕನ್ನಡ ಅಭಿವೃದ್ಧಿ ಪ್ರಾಧಿಕಾರ<br>ಅಧ್ಯಕ್ಷತೆ:<br>ಡಾ. ಬಿ. ಎಂ. ಝೂಕೀರ್,<br>ಪ್ರಾಂಶುಪಾಲರು,<br>ಆಲ್ ಅಮಿನ್ ಎಜುಕೇಷನ್ ಸೊಸೈಟಿ<br>ಮುಖ್ಯ ಅತಿಥಿ:<br>ಸುಭಾನ್ ಷರೀಫ್,<br>ಕಾರ್ಯದರ್ಶಿ,<br>ಅಲ್ ಅಮಿನ್ ಎಜುಕೇಷನ್ ಸೊಸೈಟಿ | 19-07-2016<br>ಮಂಗಳವಾರ<br>ಬೆಳಿಗ್ಗೆ 11-30 ಗಂಟೆಗೆ | ಅಲ್ ಅಮಿನ್ ಎಜುಕೇಷನ್ ಸೊಸೈಟಿ,<br>ಲಾಲ್‌ಬಾಗ್ ರಸ್ತೆ,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಕರ್ನಾಟಕ ವಿಧಾನ ಮಂಡಲದಲ್ಲಿ ಇಂದು:

# 2016–17ನೇ ಆಯವ್ಯಯಕ್ಕೆ ವಿಧಾನಸಭೆ ಒಪ್ಪಿಗೆ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ವಿತ್ತೀಯ ಕಲಾಪಗಳ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2016–17 ನೇ ಸಾಲಿನ 28 ಇಲಾಖೆಗಳು ಬೇಡಿಕೆಗೆ ವಿಧಾನಸಭೆಯು ಇಂದು ಧ್ವನಿ ಮತದ ಒಪ್ಪಿಗೆ ನೀಡಿತು.

ಅಲ್ಲದೆ, ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2016–17ನೇ ಸಾಲಿನ ಪೂರಕ ಅಂದಾಜುಗಳಿಗೆ ವಿಧಾನಸಭೆ ಧ್ವನಿ ಮತದ ಒಪ್ಪಿಗೆ ನೀಡಿತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 2016 ನೇ ಸಾಲಿನ ಧನ ವಿನಿಯೋಗ (ಸಂಖ್ಯೆ–2) ಹಾಗೂ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕಗಳಿಗೆ ವಿಧಾನಸಭೆ ಇಂದು ಧ್ವನಿ ಮತದ ಒಪ್ಪಿಗೆ ನೀಡಿತು.

ಅಲ್ಲದೆ ವಿಧಾನಸಭೆಯು ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಮಂಡಿಸಿದ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ 2016ಕ್ಕೆ ವಿಧಾನಸಭೆಯು ಧ್ವನಿ ಮತದ ಒಪ್ಪಿಗೆ ನೀಡಿತು.

ಬಾಬು:ಜಿಪಿಆರ್.

# ವಿಧಾನಸಭೆಯಲ್ಲಿ ವರದಿಗಳ ಮಂಡನೆ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ರಾಜ್ಯ ವಿಧಾನಸಭೆಯಲ್ಲಿ ಇಂದು ಕೆಳಕಂಡ ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿಯ ಅಧ್ಯಕ್ಷರು ಹಾಗೂ ವಿಧಾನಸಭೆಯ ಉಪಾಧ್ಯಾಕ್ಷರಾದ ಎನ್.ಹೆಚ್. ಶಿವಶಂಕರರೆಡ್ಡಿ ಅವರು 2015–16 ನೇ ಸಾಲಿನ ಅರ್ಜಿಗಳ ಸಮಿತಿಯ 21 ನೇ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿದರು.

ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಅಧ್ಯಕ್ಷರಾದ ಕೆ.ಎನ್. ರಾಜಣ್ಣ ಅವರು ಸಮಿತಿಯ 14ನೇ, 15ನೇ,16ನೇ,17 ನೇ, 18ನೇ ಹಾಗೂ 19 ನೇ ವರದಿಗಳನ್ನು ಮಂಡಿಸಿದರು.

ಕರ್ನಾಟಕ ವಿಧಾನಸಭೆಯ ಹಕ್ಕುಬಾಧ್ಯತೆಗಳ ಸಮಿತಿಯ ಸದಸ್ಯರಾದ ಜೆ.ಆರ್. ಲೋಬೋ ಅವರುಸಮಿತಿಯ 1 ಮತ್ತು 2ನೇ ವರದಿಗಳನ್ನು ಮಂಡಿಸಿದರು.

ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷರಾದ ಡಾ. ಎ. ಬಿ. ಮಾಲಕರೆಡ್ಡಿ ಅವರು ಸಮಿತಿಯ 44ನೇ ವರದಿಯನ್ನು ಮಂಡಿಸಿದರು.

ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪಿ.ಎಂ. ನರೇಂದ್ರಸ್ವಾಮಿ ಅವರು ಸಮಿತಿಯ ಐದನೇ ವರದಿಯನ್ನು ಮಂಡಿಸಿದರು.

ಅಕ್ರಮ ಮರಳು ಗಣಿಗಾರಿಕೆ ಅಧ್ಯಯನ ತಂಡದ ಅಧ್ಯಕ್ಷರಾದ ಡಾ. ರಫೀಕ್ ಅಹಮ್ಮದ್ ಎಸ್ ಅವರು ತಂಡದ ಅಂತಿಮ ವರದಿಯನ್ನು ಮಂಡಿಸಿದರು.

ಬಾಬು:ಜಿಪಿಆರ್.

# ಡಿಪ್ಲೋಮಾ ಸಿನೆಮಾಟೊಗ್ರಫಿ, ಸೌಂಡ್ ರೆಕಾರ್ಡಿಂಗ್ ಇಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆವತಿಯಿಂದ ಪ್ರಸಕ್ತ 2016-17 ನೇ ಸಾಲಿನ ಡಿಪ್ಲೋಮಾ ಸಿನೆಮಾಟೊಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ ಅಂಡ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಅರ್ಜಿಗಳನ್ನು ನೀಡಲಾಗುತ್ತಿದೆ.

ಕರ್ನಾಟಕ ಅಭ್ಯರ್ಥಿಗಳಿಗೆ ಶೇ 50 ರಷ್ಟು ಮತ್ತು ನೂತನ ಸರ್ಕಾರಿ ಆದೇಶದ ಪ್ರಕಾರ ಹೊರ ರಾಜ್ಯದ ಅಭ್ಯರ್ಥಿಗಳಿಗೆ ಶೇ 50 ರಷ್ಟು ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಗಳು ಕರ್ನಾಟಕದ ದ್ವಿತೀಯ ಪಿ.ಯು.ಸಿ. ವಿಜ್ಞಾನ (ಪಿ.ಸಿ.ಎಂ.) ಅಥವಾ ತತ್ಸಮಾನ, ಹಾಗೂ ಹೊರ ರಾಜ್ಯಗಳ ಅಭ್ಯರ್ಥಿಗಳು 10+2 ವಿಜ್ಞಾನ (ಪಿ.ಸಿ.ಎಂ.) ವಿಷಯಗಳಲ್ಲಿ ತೇರ್ಗಡೆ ಹೊಂದಿರಬೇಕು. ಎಲ್ಲಾ ಅಭ್ಯರ್ಥಿಗಳು ಒಟ್ಟಾರೆ ಶೇ 35 ಅಂಕ ಪಡೆದು ತೇರ್ಗಡೆಯಾಗಿರಬೇಕು.

"ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿರುವ ಚಾಲ್ತಿ ಖಾತೆ 'ED-KEA-DCET-2016 Application Fee Collection Account No 64097386381 ಅಥವಾ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಶಾಖೆಯಾಗಿದ್ದಲ್ಲಿ ಚಾಲ್ತಿ ಖಾತೆ 'ED-KEA-DCET-2016 Application Fee Collection Account No 662417732180 ಗೆ GM/IIA/IIB/IIIA/IIIB/Non Karnataka ವರ್ಗದ ಅಭ್ಯರ್ಥಿಗಳು ರೂ. 100/- ಮತ್ತು SC/ST ಮತ್ತು Cat-1 ರ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ರೂ 50/- ನ್ನು ಪಾವತಿಸಿದ ಬ್ಯಾಂಕ್ ಚಲನ್‌ನ್ನು ಪ್ರಾಂಶುಪಾಲರ ಕಚೇರಿ, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ ಅಂಚೆ, ಬೆಂಗಳೂರು- 88, ಇಲ್ಲಿ ಕಚೇರಿ ಸಮಯದಲ್ಲಿ ಸಲ್ಲಿಸಿ ಅರ್ಜಿಯನ್ನು ಪಡೆಯಬಹುದು.

ಪ್ರವೇಶಕ್ಕೆ ಸಂಬಂಧಿಸಿದ ಅರ್ಜಿಗಳನ್ನು ವಿತರಿಸುವ ಮತ್ತು ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಜುಲೈ 23 ಅಂತಿಮ ದಿನವಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂ: 080 – 28446672, ಅನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಬಾಬು:ಜಿಪಿಆರ್.